ಓಎಸ್.262/2022
ಪಿ.ಡಬ್ಲ್ಯೂ-2

<u>ದಿನಾಂಕಃ 24-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಪಾಟೀ ಸವಾಲುಃ</u>- ಪ್ರತಿವಾದಿ ಪರವಾಗಿ ಶ್ರೀ.ಎಂ.ಎನ್.ಬಿ ವಕೀಲರಿಂದಃ-**

ನನ್ನ ಸ್ವಂತ ಊರು ಬೂದೇನಹಳ್ಳಿ. ದಾವಾ ಆಸ್ತಿ ಇರುವುದು ತಂತಾನಹಳ್ಳಿಯಲ್ಲಿ. ದಾವಾ ಆಸ್ತಿ ಇರುವುದು ಐ.ಡಿ.ಹಳ್ಳಿಯಲ್ಲಿ ನಾವಿರುವುದು ಕೊಡಿಗೇನಳ್ಳಿ ಹೋಬಳಿಯಲ್ಲಿ. ಈ ದಾವೆಯನ್ನು ಜಮೀನು ಖರೀದಿ ಮಾಡಿರು ಬಗ್ಗೆ ಹಾಕಿರುತ್ತಾರೆ. ನಾನು 1 ನೇ ತರಗತಿಯ ವರೆಗೂ ವ್ಯಾಸಂಗ ಮಾಡಿರುತ್ತೇನೆ. ನನಗೆ ಆಂಗ್ಲ ಬಾಷೆ ಓದಲು ಮತ್ತು ಬರೆಯಲು ಬರುವುದಿಲ್ಲ. ದಾವಾ ಆಸ್ತಿಯನ್ನು ವಾದಿ ಯಾವ ದಿನಾಂಕದಂದು ಮತ್ತು ಯಾರ ಕಡೆಯಿಂದ ಖರೀದಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ವಾದಿ ದಾವಾ ಆಸ್ತಿಯನ್ನು ಪ್ರತಿವಾದಿಗೆ ಮಾರಾಟ ಮಾಡಿದ ದಿನಾಂಕ, ತಿಂಗಳು, ವರ್ಷ ಗೊತ್ತಿಲ್ಲ. ವಾದಿ ದಾವಾ ಆಸ್ತಿಯನ್ನು ಪ್ರತಿವಾದಿಗೆ ಮಾರಾಟ ಮಾಡಿದ ದಿನಾಂಕ  ದಿನಾಂಕ, ತಿಂಗಳು, ವರ್ಷವನ್ನು ನನ್ನ ಮುಖ್ಯ ವಿಚಾರಣ ಪ್ರಮಾಣ ಪತ್ರದಲ್ಲಿ ತಿಳಿಸಿಲ್ಲ.

ದಾವಾ ಆಸ್ತಿಯ ಖಾತೆ, ಪಹಣಿಯನ್ನು  ನಾನು ನೋಡಿಲ್ಲ. ವಾದಿ ಆಸ್ತಿಯ ಸ್ವಾಧೀನಾನುಭವದಲ್ಲಿದ್ದಾರೆ. ದಾವಾ ಆಸ್ತಿ ಅಕ್ಕ ಪಕ್ಕ ಒಡಾಡುತ್ತೇನೆ ಹಾಗಾಗಿ ದಾವಾ ಆಸ್ತಿಯಲ್ಲಿ ವಾದಿ ಸ್ವಾಧೀನಾನುಭವದಲ್ಲಿದಾರೆ ಎಂದು ನನಗೆ ಗೊತ್ತು, ಆದರೆ ನಾನು ವಾದಿಯ ದಾವಾ ಆಸ್ತಿಯಲ್ಲಿ ಸ್ವಧೀನಾನುಭವದಲ್ಲಿದಾರೆ ಎಂಬುವುದರ ಬಗ್ಗೆ ದಾಖಲೆಯನ್ನು ನಾನು ನೋಡಿಲ್ಲ. ನಾನು 1 ವರ್ಷದ ಹಿಂದೆ ಕೊನೆ ಬಾರಿ ನೋಡಿದ್ದೇನೆ. ದಾವಾ ಆಸ್ತಿಯಲ್ಲಿ 1 ಶೆಡ್ ಮತ್ತು ಬೋರ್ ವೆಲ್ ಇದೆ. ದಾವಾ ಆಸ್ತಿಯಲ್ಲಿ 1 ಶೆಡ್ ಮತ್ತು ಬೋರ್ ವೆಲ್ ಯಾರು ಹಾಕಿಸಿದರು ಎಂದು ಗೊತ್ತಿಲ್ಲ ಆದರೆ ವಾದಿಯ ಸ್ವಾಧೀನಾನುಭವದಲ್ಲಿರುವುದರಿಂದ ಅವರ ದ್ದೇ ಎಂದುಕೊಂಡಿದ್ದೇನೆ.

ವಾದಿ Real Estate ವ್ಯವಹಾರ ಮಾಡುತ್ತಾರೆ ಎಂದರೆ ಸರಿ. ವಾದಿ Real Estate ವ್ಯವಹಾರ ಮಾಡುವುದರಿಂದ ಖರೀದಿ ಮಾಡಿದ ಆಸ್ತಿಗಳನ್ನು Development ಮಾಡುವುದಿಲ್ಲ ಎಂದರೆ ಸರಿಯಲ್ಲ. ಸ್ವತಃ ಮುಂದುವರೆದು ಹೇಳುತ್ತಾರೆ, ಕಡಿಮೆ ಬೆಲೆಗೆ ಆಸ್ತಿಯನ್ನು ಖರೀದಿ ಮಾಡಿ ಆ ಆಸ್ತಿಯನ್ನು Development ಮಾಡಿ ಜಾಸ್ತಿ ಹಣಕ್ಕೆ ಮಾರಾಟ ಮಾಡುತ್ತಾರೆ. ದಾವಾ ಆಸ್ತಿಯನ್ನು ಖರೀದಿ ಮಾಡಿದ ದಿನದಿಂದ ಪ್ರತಿವಾದಿ ಆ ಆಸ್ತಿಯಲ್ಲಿ ಸ್ವಾಧೀನಾನುಭವದಲ್ಲಿದ್ದು ಸುಮಾರು 25-30 ಲಕ್ಷ ಖರ್ಚು ಮಾಡಿ ದಾವಾ ಆಸ್ತಿಯನ್ನು ಸಮ ಮಾಡಿ ಕಟ್ಟಡ ಕಟ್ಟಿಸಿದ್ದಾರೆ, ಬೋರ್ ವೆಲ್ ಕೊರೆಸಿ ಅಭಿವೃದ್ಧಿ ಪಡಿಸಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು 10 ಲಕ್ಷಕ್ಕೆ ಮಾರಾಟ ಮಾಡಿದ್ದಾರೆ. ದಾವಾ ಆಸ್ತಿಯನ್ನು 28,25,000 ಕ್ಕೆ ಮಾರಾಟ ಮಾಡಿದ್ದು 18,25,000 ನಗದು ಹಣ ಕೊಟ್ಟು ಉಳಿದ 10 ಲಕ್ಷ ಹಣಕ್ಕೆ ಚೆಕ್ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಈ ಬಗ್ಗೆ ವಾದಿ ಪ್ರತಿವಾದಿಗೆ ಒಂದು ಕರಾರು ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

ಆನಂದಮ್ಮ ಎನ್ನುವವರು ವಾದಿಯ ಮೇಲೆ ಕೇಸ್ ಹಾಕಿದ್ದಾರೆ ಎಂದರೆ ಗೊತ್ತಿಲ್ಲ. ಆನಂದಮ್ಮರವರು ವಾದಿಯ ಮೇಲೆ ಅಸಲು ದಾವಾ ಸಂಖ್ಯೆ:468/2018 ದಾವೆ ಹಾಕಿರುವ ವಿಚಾರ ನಮಗೆಲ್ಲಾ ಗೊತ್ತಿತ್ತು ಸದರಿ ವಿಚಾರ ಮುಚಿಟ್ಟು ಪ್ರತಿವಾದಿಗೆ ಮೋಸ ಮಾಡುಬೇಕೆಂಬ ಉದ್ದೇಶದಿಂದ ಕ್ರಯ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಕ್ರಯ ವ್ಯವಹಾರವು 28,25,000 ಕ್ಕೆ ಆಗಿರುವ ವಿಚಾರ ನನಗೆ ಗೊತಿದ್ದರೂ ಸಹ 10 ಲಕ್ಷ ಎಂದು ಬರೆದಿರುವ ಕಾರಣ ಕ್ರಯದ ವ್ಯವಹಾರ 10 ಲಕ್ಷಕ್ಕೆ ಹಾಗಿದೆ ಎಂದು ಸುಳ್ಳು ಸಾಕ್ಷ್ಯ ಹೇಳುತಿದ್ದೇನೆ ಎಂದರೆ ಸರಿಯಲ್ಲ.

ವಾದಿ ಮತ್ತು ಪ್ರತಿವಾದಿ ಸಂಬಂಧಿಕರಲ್ಲ ಎಂದರೆ ಸರಿ. ಸಾಮಾನ್ಯವಾಗಿ

ಕ್ರಯದ ಹಣವನ್ನು ಪಡೆಯದೆ ಯಾರೂ ಖರೀದಿದಾರರ ಹೆಸರಿಗೆ ಶುದ್ಧ ಕ್ರಯಪತ್ರ ಬರೆದುಕೊಡುವುದಿಲ್ಲ ಎಂದರೆ ಸರಿ. ಕ್ರಯ ಪತ್ರದ ಪ್ರಕಾರ ದಾವಾ ಆಸ್ತಿಯ ಖಾತೆ ಪಹಣಿ ಪ್ರತಿವಾದಿಯ ಹೆಸರಿನಲ್ಲಿದ್ದು ಪ್ರತಿವಾದಿಯೇ ದಾವಾ ಆಸ್ತಿಯ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. ನಾನು ಮತ್ತು ವಾದಿ Real Estate ವ್ಯವಹಾರ ಮಾಡುವುದರಿಂದ ತುಂಬಾ ವಿಶ್ವಾಸಿ ಎಂದರೆ ಸರಿ.

ನಾನು 10-15 ಕ್ರಯ ವ್ಯವಹಾರ ಮಾಡಿಸಿದ್ದೇನೆ. ಯಾರ್ ಯಾರ್ ಮಧ್ಯ ಯಾವಾಗ  ವ್ಯವಹಾರ ಮಾಡಿಸಿದ್ದೇನೆ, ಅವರ ಹೆಸರುಗಳು, ಸರ್ವೆ ನಂಬರ್ ಮತ್ತು ವಿಸ್ತೀರ್ಣ ಹೇಳಲು ಬರುವುದಿಲ್ಲ. ಈ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲದಿದ್ದರೂ ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಸಹಾಯ ಮಾಡಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

Sd/-
ಅಧಿಕ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ